# ಕನ್ನಡ ಶಾಸನ ಮತ್ತು ಸಾಹಿತ್ಯ: ಜೈನ ಶಿಕ್ಷಣ ಪರಂಪರೆ

ಬಾಬುರಾಯ ದೊರೆ* & ಬಸಯ್ಯ ಸ್ವಾಮಿ**

DOI: https://doi.org/10.5281/zenodo.23097023

**ABSTRACT**

ನಾವು ಪ್ರಾಚೀನ ಮತ್ತು ಮಧ್ಯಕಾಲೀನ ಸಂದರ್ಭದ ಕರ್ನಾಟಕದ ಬಹು ಸಾಂಸ್ಕೃತಿಕ ಇತಿಹಾಸದಲ್ಲಿ ಜೈನಧರ್ಮವು ವಹಿಸಿದಂತಹ ಪಾತ್ರ ಮಹತ್ವವಾದದ್ದು. ಸುಮಾರು ಒಂದು ಸಾವಿರ ವರ್ಷಗಳ ಸುದೀರ್ಘ ಕಾಲದಲ್ಲಿ ಅನೇಕ ರಾಜಮನೆತನಗಳ ಆಶ್ರಯದಲ್ಲಿ ಬೆಳೆದ ಈ ಜೈನ ಧರ್ಮವು, ಕೇವಲ ಆಧ್ಯಾತ್ಮಿಕ ಕ್ಷೇತ್ರಕ್ಕೆ ಸೀಮಿತವಾಗದೆ ಶಿಕ್ಷಣ ಕ್ಷೇತ್ರದಲ್ಲಿಯೂ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿತು. ಇಲ್ಲಿ ಶ್ರವಣಬೆಳಗೊಳ ಪ್ರದೇಶ ಸೇರಿದಂತೆ ಕರ್ನಾಟಕದ ಅನೇಕ ಪ್ರದೇಶಗಳಲ್ಲಿ ಸಿಕ್ಕಿರುವ ಶಾಸನಗಳು ಹಾಗೂ ಕನ್ನಡದ ಮೊದಲ ಗದ್ಯ ಗ್ರಂಥ ವಡ್ಡಾರಾಧನೆಯಂತಹ ಪ್ರಾಚೀನ ಕನ್ನಡ ಸಾಹಿತ್ಯ ಕೃತಿಗಳನ್ನು ಅನುಲಕ್ಷಿಸಿ ಜೈನ ಶಿಕ್ಷಣ ಪರಂಪರೆಯನ್ನು ಸಮಗ್ರವಾಗಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ರಾಜಾಶ್ರಯದ ಚಾರಿತ್ರಿಕ ಹಿನ್ನೆಲೆ, ಬಸದಿ-ಚೈತ್ಯಾಲಯಗಳು ವಿದ್ಯಾಕೇಂದ್ರಗಳಾಗಿ ರೂಪುಗೊಂಡ ಬಗೆ, ವಿದ್ಯಾಭ್ಯಾಸ ಆರಂಭದ ವಯೋಮಿತಿ, ಗುರು-ಶಿಷ್ಯ ಪರಿಭಾಷೆ, ಬೋಧನಾ ವಿಧಾನ, ಪಠ್ಯಕ್ರಮದ ವ್ಯಾಪ್ತಿ ಮತ್ತು ಸಹ ಶಿಕ್ಷಣ ಪದ್ಧತಿ ಎಂಬ ಆರು ಆಯಾಮಗಳ ಮೂಲಕ ಈ ಅಧ್ಯಯನ ರೂಪುಗೊಂಡಿದೆ. ವೈದಿಕ ಪರಂಪರೆಯ ಜಾತಿ-ಲಿಂಗಾಧಾರಿತ ಶೈಕ್ಷಣಿಕ ನಿರ್ಬಂಧಗಳಿಗೆ ಪ್ರತಿಕ್ರಿಯೆಯಾಗಿ ರೂಪುಗೊಂಡ ಜೈನ ಶಿಕ್ಷಣ ಪದ್ಧತಿ, ಎಲ್ಲರಿಗೂ ಪ್ರವೇಶ, ಸ್ಥಳೀಯ ಭಾಷೆ, ಮತ್ತು ಎಲ್ಲರನ್ನು ಒಳಗೊಳ್ಳುವ ಮೂಲಕ ಕರ್ನಾಟಕದ ಸಾಂಸ್ಕೃತಿಕ ಸಾಮಾಜಿಕ ಇತಿಹಾಸದಲ್ಲಿ ಶಾಶ್ವತ ಗುರುತನ್ನು ಮೂಡಿಸಿತು ಎಂಬುದರ ಕುರಿತು ಈ ಅಧ್ಯಯನ ನಡೆಸಿದೆ.

**KEYWORDS:** ಜೈನ ಶಿಕ್ಷಣ ಪರಂಪರೆ, ಬಸದಿ, ಚೈತ್ಯಾಲಯ, ರಾಜಾಶ್ರಯ, ಶ್ರವಣಬೆಳಗೊಳ, ಗುರು-ಶಿಷ್ಯ ಪರಂಪರೆ, ಪಠ್ಯಕ್ರಮ, ಸಹ ಶಿಕ್ಷಣ.

* **ಡಾ. ಬಾಬುರಾಯ ದೊರೆ,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಪ್ರಥಮ ದರ್ಜೆ ಕಾಲೇಜು, ಶಹಾಪುರ.

** **ಡಾ. ಬಸಯ್ಯ ಸ್ವಾಮಿ,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಜೈನ್ (ಡೀಮ್ಡ್-ಟು-ಬಿ ವಿಶ್ವವಿದ್ಯಾಲಯ), ಬೆಂಗಳೂರು

**ಪ್ರವೇಶಿಕೆ**

ದಕ್ಷಿಣ ಭಾರತದ ಜೈನಧರ್ಮದ ಇತಿಹಾಸವೆಂದರೆ ಕರ್ನಾಟಕದ ಜೈನಧರ್ಮದ ಇತಿಹಾಸವೇ ಆಗಿದೆ ಎಂಬ ಮಾತು ಅತಿಶಯೋಕ್ತಿಯಲ್ಲ ಎಂಬ ಪ್ರತಿಪಾದನೆ[1] ಜೈನಧರ್ಮ ಮತ್ತು ಕರ್ನಾಟಕದ ನಡುವಿನ ಅವಿನಾಭಾವ ಸಂಬಂಧವನ್ನು ಸಾರುತ್ತದೆ. ಕ್ರಿ.ಪೂ. ಎರಡನೆಯ ಶತಮಾನದಿಂದ ಹಿಡಿದು ಹದಿಮೂರನೆಯ ಶತಮಾನದವರೆಗೆ, ಅಂದರೆ ಸುಮಾರು ಒಂದು ಸಾವಿರ ವರ್ಷಗಳ ಕಾಲ, ಗಂಗರು, ಕದಂಬರು, ರಾಷ್ಟ್ರಕೂಟರು, ಚಾಲುಕ್ಯರು ಮತ್ತು ಹೊಯ್ಸಳರು ಮುಂತಾದ ರಾಜಮನೆತನಗಳ ಸಹಕಾರದೊಂದಿಗೆ ಜೈನಧರ್ಮ ಪ್ರಫುಲ್ಲವಾಗಿ ಬೆಳೆಯಿತು. ಒಬ್ಬ ಶಾಸನ ಕವಿ ಕರ್ನಾಟ ದೇಶವನ್ನು 'ಜಿನಧರ್ಮವಾಸ'ವೆಂದೂ, ವಿದ್ಯೆಗೆ ಜನ್ಮಸ್ಥಾನವೆಂದೂ ಬಣ್ಣಿಸಿರುವ ಪದ್ಯ[2] ಈ ಸಾಂಸ್ಕೃತಿಕ ಸಂಬಂಧದ ಆಳವನ್ನು ಸೂಚಿಸುತ್ತದೆ. ಕದಂಬ, ಚಾಲುಕ್ಯ ಮತ್ತು ವಿಜಯನಗರದ ಅರಸರು ಸ್ವತಃ ಜೈನಾನುಯಾಯಿಗಳಲ್ಲದಿದ್ದರೂ ಜೈನ ಮತಕ್ಕೂ ಪಂಡಿತರಿಗೂ ಅನೇಕ ರೀತಿಯ ಸಹಾಯ ಮಾಡಿ ಪ್ರೋತ್ಸಾಹ ನೀಡಿದ ಸಂಗತಿ[3] ಜೈನ ಶಿಕ್ಷಣ ಪರಂಪರೆಯ ವಿಶಾಲ ಸಾಮಾಜಿಕ ತಳಹದಿಯನ್ನು ದೃಢಪಡಿಸುತ್ತದೆ. ಜೈನಧರ್ಮ ಕೇವಲ ಒಂದು ಸಮುದಾಯದ ಆಚರಣೆಯಾಗಿ ಉಳಿಯಲಿಲ್ಲ. ಬದಲಿಗೆ ಅದು ಕನ್ನಡ ಭಾಷೆ, ಕನ್ನಡ ಸಾಹಿತ್ಯ ಮತ್ತು ಕನ್ನಡ ಶಿಕ್ಷಣ ಕ್ಷೇತ್ರಗಳಲ್ಲಿ ಗುರುತನ್ನು ಮೂಡಿಸಲು ವಿಶಾಲವಾಗಿ ದೊರೆತ ರಾಜಾಶ್ರಯ ಮತ್ತು ಅದಕ್ಕೆ ಸಿಕ್ಕ ಸಾಮಾಜಿಕ ಸ್ವೀಕಾರಾರ್ಹತೆಯಿಂದ ಎಂಬ ಅಂಶಗಳನ್ನು ಈ ಲೇಖನ ಚರ್ಚಿಸಲು ಪ್ರಯತ್ನಿಸಿದೆ.

**ಜೈನಧರ್ಮಕ್ಕೆ ದೊರೆತ ರಾಜಾಶ್ರಯ : ಶಿಕ್ಷಣ ಪರಂಪರೆಯ ಸಾಂಸ್ಥಿಕ ಬುನಾದಿ**

ಜೈನ ಶಿಕ್ಷಣ ಪರಂಪರೆಯ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಬೇಕಾದರೆ, ಅದಕ್ಕೆ ಆಧಾರವಾಗಿ ನಿಂತ ರಾಜಾಶ್ರಯದ ಚಾರಿತ್ರಿಕ ಹಂತಗಳನ್ನು ನಾವು ಮೊದಲು ನೋಡಬೇಕು. ಕ್ರಿ.ಪೂ. 4ನೇ ಶತಮಾನದ ಕೊನೆಯಲ್ಲಿ ಮೌರ್ಯ ಚಕ್ರವರ್ತಿ ಚಂದ್ರಗುಪ್ತ ಮೌರ್ಯ ಮತ್ತು ಅವನ ರಾಜಗುರು ಭದ್ರಬಾಹು ತನ್ನ ಹನ್ನೆರಡು ಸಾವಿರ ಜೈನ ಮುನಿಗಳ ಜೊತೆಗೆ ಕರ್ನಾಟಕದ ಶ್ರವಣಬೆಳಗೊಳಕ್ಕೆ ಬಂದು ತಪಸ್ಸು ಕೈಗೊಂಡಿರುವ ಐತಿಹಾಸಿಕ ಸಂಗತಿ ಕರ್ನಾಟಕದ ಜೈನ ಪರಂಪರೆಯ ಒಟ್ಟು ಇತಿಹಾಸಕ್ಕೆ ಸಾಕ್ಷಿಯಾಗಿ ನಾಂದಿಯಾಗಿ ನಿಂತಿದೆ. ಇಂದಿಗೂ ಕೂಡ ಅಲ್ಲಿ ಉಳಿದುಬಂದಿರುವ ಚಂದ್ರಗುಪ್ತ ಬಸದಿ ಮತ್ತು ಭದ್ರಬಾಹು ಗುಹೆ ಇದಕ್ಕೆ ಭೌತಿಕ ಸಾಕ್ಷಿಗಳಾಗಿ ನಾವು ನೋಡುತ್ತೇವೆ. ಮುಂದೆ ಶಾತವಾಹನರ ಕಾಲದ ಬಗ್ಗೆ ನಮಗೆ ನಿಖರ ಆಧಾರಗಳು ದೊರಕದಿದ್ದರೂ, ಕದಂಬರ ಆಳ್ವಿಕೆಯ ಕಾಲಕ್ಕೆ ಬಂದಾಗ ಜೈನಧರ್ಮಕ್ಕೆ ಗಣನೀಯ ಮನ್ನಣೆ ದೊರಕಿತು ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ.

ಕನ್ನಡದ "ಕದಂಬರ ರಾಜನಾದ ಮೃಗೇಶ ವರ್ಮನು ಮತ್ತು ಅವನ ಮಗನಾದ ರವಿವರ್ಮನ ಕಾಲ ಕ್ರಿ.ಶ. 538ರಲ್ಲಿ ಬರೆದ ತಾಮ್ರಪಟದಲ್ಲಿ ಹಲಸಿ

ಎಂಬ ನಗರದಲ್ಲಿ ಭೂಮಿಯನ್ನು ಕೆಲವು ಯಾಪನೀಯ ನಿರ್ಗ್ರಂಥರಿಗೆ ದಾನ ನೀಡಿರುವ ಮತ್ತು ಆ ಭೂಮಿಯಿಂದ ಬಂದ ಆದಾಯದಿಂದ ಆ ವರ್ಷದ ನಾಲ್ಕು ತಿಂಗಳುಗಳ ಕಾಲ ಜೈನ ಮುನಿಗಳಿಗೆ ಆಹಾರದಾನವನ್ನು ಮಾಡಬೇಕೆಂಬ ಒಂದು ಸ್ಪಷ್ಟ ಉಲ್ಲೇಖ"[4] ನಮಗೆ ಸಿಗುತ್ತದೆ. ಇದೇ ಕಾಲಘಟ್ಟದ ಇನ್ನೊಂದು ತಾಮ್ರಶಾಸನದಲ್ಲಿ "ಎಲ್ಲಿ ಜಿನ ಪೂಜೆ ನಡೆಯುತ್ತದೆಯೋ ಆ ದೇಶ ವೃದ್ಧಿಯಾಗುತ್ತದೆ, ನಗರಗಳು ನಿರ್ಭಯವಾಗುತ್ತವೆ, ರಾಜನು ಊರ್ಜಿತನಾಗುತ್ತಾನೆ"[5] ಎಂಬ ಹೇಳಿಕೆ ದೊರಕುತ್ತದೆ. ಈ ಎರಡು ಉಲ್ಲೇಖಗಳನ್ನು ನಾವು ಒಟ್ಟಿಗೆ ವಿಶ್ಲೇಷಿಸಿದಾಗ, ಕದಂಬರು ಸ್ವತಃ ವೈದಿಕ ಮತಾನುಯಾಯಿಗಳಾಗಿದ್ದರೂ ಜೈನ ಸಂಘಕ್ಕೆ ಆರ್ಥಿಕ ಭದ್ರತೆ ಒದಗಿಸಿದ್ದು ಕಂಡುಬರುತ್ತದೆ. ಇಷ್ಟು ಮಾತ್ರವಲ್ಲದೆ, ಜೈನಧರ್ಮದ ರಾಜಕೀಯ-ಧಾರ್ಮಿಕ ಸಿದ್ಧಾಂತವನ್ನೂ ರಾಜಸತ್ತೆಯ ಸಿದ್ಧಾಂತದೊಂದಿಗೆ ಬೆಸೆದುಕೊಂಡಿದ್ದರು ಎಂಬುದು ಕೂಡ ನಮಗೆ ಸ್ಪಷ್ಟವಾಗುತ್ತದೆ. ಇದೇ ಆರ್ಥಿಕ ಭದ್ರತೆಯ ಮಾದರಿಯೇ ಮುಂದೆ ಬಸದಿಗಳನ್ನು ವಿದ್ಯಾಕೇಂದ್ರಗಳನ್ನಾಗಿ ಪರಿವರ್ತಿಸಲು ಅಗತ್ಯವಾದ ಸಾಂಸ್ಥಿಕ ಚೌಕಟ್ಟನ್ನು ಒದಗಿಸಿತು ಎಂಬುದು ಗಮನಿಸಬಹುದು.

ಕದಂಬರ ಆಳ್ವಿಕೆಯ ನಂತರ ಬಂದ ಗಂಗರ ಆಳ್ವಿಕೆಯಲ್ಲಿ ಜೈನಧರ್ಮವು ಶಿಖರ ಸ್ಥಿತಿಗೇರಿತು. ಗಂಗರಾಜನಾದ ದುರ್ವಿನೀತನು ಕೋಗಳಿಯಲ್ಲಿ ಕಟ್ಟಿಸಿದ ಜಿನಾಲಯವನ್ನು ಇಂದ್ರಕೀರ್ತಿಗಳೆಂಬ ಮುನೀಂದ್ರರು ಜೀರ್ಣೋದ್ಧಾರ ಮಾಡಿಸಿ, ಮಾಣಿಗಳ ವಿದ್ಯಾಭ್ಯಾಸಕ್ಕಾಗಿ ದತ್ತಿಯನ್ನು ಹೊಸದಾಗಿಸಿದ ಉಲ್ಲೇಖ[6] ಅತ್ಯಂತ ಮಹತ್ವದ್ದಾಗಿದೆ. ಇದು ಜಿನಾಲಯ ಕೇವಲ ಪೂಜಾ ಸ್ಥಳವಾಗಿರದೆ, ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿಯೇ ಪ್ರತ್ಯೇಕ ದತ್ತಿ ವ್ಯವಸ್ಥೆ ಹೊಂದಿದ್ದ ಸಾಂಸ್ಥಿಕ ಕೇಂದ್ರವಾಗಿತ್ತು ಎಂಬುದನ್ನು ನೇರವಾಗಿ ಸಾಬೀತುಪಡಿಸುತ್ತದೆ. ಗಂಗರ ಮಂತ್ರಿ ಚಾವುಂಡರಾಯನು ಶ್ರವಣಬೆಳಗೊಳದಲ್ಲಿ ಬಾಹುಬಲಿ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಸಂಗತಿ[7] ಶ್ರವಣಬೆಳಗೊಳವನ್ನು ಜೈನ ಧಾರ್ಮಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳ ಪ್ರಮುಖ ಕೇಂದ್ರವನ್ನಾಗಿ ಸ್ಥಾಪಿಸುವಲ್ಲಿ ಮಹತ್ವದ ಪಾತ್ರವಹಿಸಿತು; ಮುಂದಿನ ಶತಮಾನಗಳಲ್ಲಿ ಇದೇ ಸ್ಥಳ ಜೈನ ಶಿಕ್ಷಣ ಪರಂಪರೆಯ ಅತಿ ಹೆಚ್ಚು ಶಾಸನ ಸಾಕ್ಷ್ಯ ಒದಗಿಸುವ ಕೇಂದ್ರವಾಗಿ ಬೆಳೆಯಿತು ಎಂಬುದನ್ನು ಈ ಲೇಖನದ ಮುಂದಿನ ಭಾಗಗಳಲ್ಲಿ ಕಾಣಬಹುದು.

ಗಂಗರ ಮನೆತನದ ಅವನತಿಯ ನಂತರ ಆಡಳಿತದ ಅಧಿಕಾರಕ್ಕೆ ಬಂದಂತಹ ಬಾದಾಮಿ ಚಾಲುಕ್ಯರ ಮತ್ತು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಈ ಜೈನಧರ್ಮ ರಾಜಾಶ್ರಯ ಪಡೆದುಕೊಂಡಿತು. ಇದಕ್ಕೆ ಸಾಕ್ಷಿಯಾಗಿ ಐಹೊಳೆ ಶಾಸನದ ಕರ್ತೃವಾದ ರವಿಕೀರ್ತಿಯು ಸ್ವತಃ ಜೈನ ಧರ್ಮೀಯನಾಗಿ ಒಂದು ಬಸದಿಯನ್ನು ಕಟ್ಟಿಸಿರುವ ಉಲ್ಲೇಖವಿದೆ. ನಂತರ ರಾಜ ಇಮ್ಮಡಿ ಪುಲಕೇಶಿಯು ಮೇಗುತಿ ಜಿನಾಲಯವನ್ನು ನಿರ್ಮಿಸಿರುವ ಸಂಗತಿಗಳು ಚಾಲುಕ್ಯರ ಜೈನಧರ್ಮ ಪೋಷಣೆಯ ನಿದರ್ಶನಗಳಾಗಿ ನಮಗೆ ಸಿಗುತ್ತವೆ. ಅನಂತರ ಬಂದ ರಾಷ್ಟ್ರಕೂಟರ ಕಾಲದಲ್ಲಿಯಂತೂ ಜೈನ ಶಿಕ್ಷಣ-ಸಾಹಿತ್ಯ ಪರಂಪರೆ ಉತ್ತುಂಗಕ್ಕೇರಿತು. ಅಮೋಘವರ್ಷ ನೃಪತುಂಗನನ್ನು "ಎಲ್ಲಾ

ರಾಷ್ಟ್ರಕೂಟರಲ್ಲಿ ಜೈನಧರ್ಮದ ಅತಿ ದೊಡ್ಡ ಪೋಷಕನಾಗಿ, ಸ್ವತಃ ಜೈನಮತವನ್ನು ಸ್ವೀಕರಿಸಿದವನು"[8] ಎಂದು ವಿದೇಶಿ ಇತಿಹಾಸಕಾರರೊಬ್ಬರು ಗುರುತಿಸಿರುವ ಹೇಳಿಕೆ ನಮಗೆ ಸಿಗುತ್ತದೆ. ಈ ರಾಜನ ವೈಯಕ್ತಿಕ ಶ್ರದ್ಧೆ ಮತ್ತು ಸಾಂಸ್ಥಿಕ ಪೋಷಣೆ ಎರಡನ್ನೂ ಏಕಕಾಲಕ್ಕೆ ಈ ಹೇಳಿಕೆ ದೃಢಪಡಿಸುತ್ತದೆ. ಸ್ವತಃ ಗ್ರಂಥಕಾರನಾಗಿ 'ಪ್ರಶೋತ್ತರ ರತ್ನಮಾಲಿಕ' ಬರೆದ ಈತನ ಆಸ್ಥಾನದಲ್ಲಿಯೇ ಕನ್ನಡದ ಮೊಟ್ಟಮೊದಲ ಲಭ್ಯ ಕೃತಿ 'ಕವಿರಾಜಮಾರ್ಗ'ದ ಕರ್ತೃ ಶ್ರೀವಿಜಯ ಇದ್ದುದನ್ನು ಗಮನಿಸಿದಾಗ, ಸಿಕ್ಕ ರಾಜಾಶ್ರಯ ಮತ್ತು ಕನ್ನಡ ಸಾಹಿತ್ಯ ಸೃಷ್ಟಿಯ ನಡುವೆ ಇರುವ ನೇರವಾದ ಸಂಬಂಧ ನಮಗೆ ಸ್ಪಷ್ಟವಾಗಿ ತಿಳಿದುಬರುತ್ತದೆ.

ಇಂತಹ ಸುದೀರ್ಘವಾಗಿ ಆಳಿದ ರಾಜ ಮನೆತನಗಳ ಕಾಲಘಟ್ಟಗಳ ಸಂದರ್ಭ ಹಂತಗಳ ಕೊನೆಯಲ್ಲಿ ಹೊಯ್ಸಳರದ್ದು ಬಹಳ ಪ್ರಮುಖ ಹಂತವಾಗಿದೆ. ವಿಷ್ಣುವರ್ಧನನು ವೈಷ್ಣವ ಮತ ಸ್ವೀಕರಿಸಿದ ನಂತರವೂ ಜೈನಧರ್ಮಕ್ಕೆ ಪ್ರೋತ್ಸಾಹ ಮುಂದುವರಿಸಿದ್ದು, ವಿಷ್ಣುವರ್ಧನನ ಪಟ್ಟದ ರಾಣಿಯಾದ ಶಾಂತಲೆಯಲ್ಲಿದ್ದ ಜೈನ ಶ್ರದ್ಧೆ ಮತ್ತು ಅವರ ಸೇನಾಧಿಪತಿಯಾದಂತಹ ಗಂಗರಾಜನು ಬಸದಿ ನಿರ್ಮಾಣದಂತಹ ಅನೇಕ ಚಟುವಟಿಕೆಗಳು ಇವರ ಆಳ್ವಿಕೆಯ ಕಾಲಘಟ್ಟದ ಸಂದರ್ಭದಲ್ಲಿ ಜೈನಧರ್ಮ ಮತ್ತು ರಾಜಸತ್ತೆಗಳ ನಡುವೆ ಇದ್ದಂತಹ ಸಂಬಂಧ ಎಷ್ಟು ವೈಯಕ್ತಿಕವಾಗಿತ್ತು ಮತ್ತು ಸಾಂಸ್ಥಿಕವಾಗಿ ಯಾವ ಮಟ್ಟದಲ್ಲಿ ಪ್ರಮುಖವಾಗಿ ಆವರಿಸಿಕೊಂಡಿತ್ತು ಎಂಬುದನ್ನು ಇವು ತೋರಿಸುತ್ತವೆ. ಒಟ್ಟಾರೆಯಾಗಿ ಕರ್ನಾಟಕವನ್ನಾಳಿದ ಬಹುತೇಕ ಎಲ್ಲ ರಾಜಮನೆತನಗಳು ಜೈನಧರ್ಮಕ್ಕೆ ಪ್ರೋತ್ಸಾಹ ನೀಡಿದ್ದರಿಂದಲೇ ಕನ್ನಡ ಭಾಷೆ, ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಜೈನರ ಕೊಡುಗೆ ಇಷ್ಟು ವ್ಯಾಪಕವಾಗಿ ಬೆಳೆಯಲು ಸಾಧ್ಯವಾಯಿತು ಎಂಬುದನ್ನು ನೋಡಬಹುದು.

**ಸಾರ್ವತ್ರಿಕ ಶಿಕ್ಷಣಕ್ಕೆ ಜೈನ ಧರ್ಮ ನಾಂದಿ**

ಜೈನ ಶಿಕ್ಷಣ ಪರಂಪರೆಯ ಆಂತರಿಕ ತಾತ್ವಿಕ ನೆಲೆಯನ್ನು ಅರ್ಥಮಾಡಿಕೊಳ್ಳಬೇಕಾದರೆ, ಅದಕ್ಕೂ ಮುನ್ನ ಚಾಲ್ತಿಯಲ್ಲಿದ್ದ ವೈದಿಕ ಶಿಕ್ಷಣ ವ್ಯವಸ್ಥೆಯ ಸ್ವರೂಪವನ್ನು ಪರಿಶೀಲಿಸುವುದು ಅನಿವಾರ್ಯ. ಋಗ್ವೇದ ಕಾಲದಲ್ಲಿ ಸರ್ವರಿಗೂ ವೇದಾಧ್ಯಯನದ ಅವಕಾಶವಿತ್ತಾದರೂ, ಸ್ಮೃತಿಗಳ ಕಾಲಕ್ಕೆ ಬರುವಷ್ಟರಲ್ಲಿ ಈ ಅವಕಾಶ ಬ್ರಾಹ್ಮಣ-ಕ್ಷತ್ರಿಯ ವರ್ಗಕ್ಕೆ ಮಾತ್ರ ಸೀಮಿತವಾಯಿತು. ಶೂದ್ರರು ವೇದಮಂತ್ರ ಕೇಳಿಸಿಕೊಂಡರೆ ಕಿವಿಗೆ ಕಾದ ಸೀಸ ಸುರಿಯುವ, ವೇದಗಳನ್ನು ಓದಿದರೆ ನಾಲಿಗೆ ಕತ್ತರಿಸುವಂತಹ ಘೋರ ಶಿಕ್ಷೆಗಳ ಮೂಲಕ ಬಹುಸಂಖ್ಯಾತ ಜನಸಮುದಾಯವನ್ನೇ ಶಿಕ್ಷಣದಿಂದ ದೂರವಿಡಲಾಗಿತ್ತು. ಇಂತಹ ಅಂಧಶ್ರದ್ಧೆ ಮತ್ತು ಅನೀತಿಗಳ ವಿರುದ್ಧವೇ ಜೈನ ಹಾಗೂ ಬೌದ್ಧ ಧರ್ಮಗಳು ಹುಟ್ಟಿಕೊಂಡವು ಎಂಬುದನ್ನು ಗಮನಿಸಿದಾಗ, ಜೈನ ಶಿಕ್ಷಣ ಪದ್ಧತಿಯ ಮೂಲ ಆಶಯವೇ ಸಾಮಾಜಿಕ ಸಮಾನತೆಯದ್ದಾಗಿತ್ತು ಎಂಬುದು ನಮಗಿಲ್ಲಿ ಸ್ಪಷ್ಟವಾಗುತ್ತದೆ.

ಇಂತಹ ಒಂದು ಕ್ರಾಂತಿಕಾರಕ ಧ್ಯೇಯದಿಂದ ಹುಟ್ಟಿದ ಜೈನಧರ್ಮವು

ವಿದ್ಯಾಭ್ಯಾಸದಲ್ಲಿ ಮಹತ್ವದ ಬದಲಾವಣೆಗಳನ್ನು ತಂದಿತು. ಶಿಕ್ಷಣವನ್ನು ಜಾತಿಪದ್ಧತಿ, ಮೇಲು-ಕೀಳು ಮತ್ತು ಹೆಣ್ಣು-ಗಂಡು ಎಂಬ ಭಾವನೆಯಿಂದ ಮುಕ್ತಗೊಳಿಸಿ ಸಾರ್ವತ್ರಿಕಗೊಳಿಸಲಾಯಿತು. ಇದೇ ಸಂದರ್ಭದಲ್ಲಿ ಜೈನರು ತಮ್ಮ ಧರ್ಮಪ್ರಸಾರ ಹಾಗೂ ವಿದ್ಯಾಭ್ಯಾಸಕ್ಕಾಗಿ ಪ್ರಾಂತೀಯ ಭಾಷೆಗಳನ್ನು ಆಯ್ಕೆ ಮಾಡಿಕೊಂಡರು. ಸ್ವತಃ ಆಚಾರ್ಯರೇ ಮಾತೃಭಾಷೆಯಲ್ಲಿ ಶಿಕ್ಷಣ ನೀಡಿದ್ದರಿಂದ ಸರ್ವಜನರಿಗೂ ಇದು ತಲುಪುವಂತಾಯಿತು. ಸಂಸ್ಕೃತದಂತಹ ಶಿಷ್ಟ ಭಾಷೆಗೆ ಬದಲಾಗಿ ಕನ್ನಡವನ್ನೇ ಜ್ಞಾನ ಪ್ರಸಾರದ ಮಾಧ್ಯಮವನ್ನಾಗಿ ಆಯ್ಕೆ ಮಾಡಿಕೊಂಡ ಈ ನಿರ್ಧಾರವನ್ನು ಕೇವಲ ಪ್ರಾಯೋಗಿಕ ಅನುಕೂಲಕ್ಕಾಗಿ ಮಾಡಿದ ಆಯ್ಕೆಯೆಂದು ಮಾತ್ರ ನೋಡದೆ, ಇದನ್ನು ಜ್ಞಾನದ ಪ್ರಜಾಪ್ರಭುತ್ವೀಕರಣಗೊಳಿಸಿದಂತಹ (democratization of knowledge) ಒಂದು ಪ್ರಜ್ಞಾಪೂರ್ವಕವಾದ ನೀತಿಯೇ ಆಗಿದೆ ಎಂದು ಕರೆಯುವುದು ಹೆಚ್ಚು ಸರಿ ಎನಿಸುತ್ತದೆ. ಈ ನೀತಿಯ ಕಾರಣದಿಂದಾಗಿ ಕನ್ನಡ ಭಾಷೆಯ ಪ್ರಾಚೀನ ಕಾಲದಿಂದ ಅನೇಕ ಶ್ರೇಷ್ಠ ಮಹತ್ವದ ಕೃತಿಗಳು ಈ ಜೈನ ಕವಿಗಳಿಂದಲೇ ರಚನೆಯಾದವು ಎಂಬುದನ್ನು ಇಲ್ಲಿ ನಾವು ನೋಡಬಹುದು.

ಈ ಸಮಾನತಾ ತತ್ವದ ಒಂದು ಸಹಜ ವಿಸ್ತರಣೆಯಾಗಿ ಸ್ತ್ರೀ ಶಿಕ್ಷಣದ ಪರಿಕಲ್ಪನೆಯೂ ಬೆಳೆದು ಬಂದಿರುವುದನ್ನು ನಾವು ನೋಡಬಹುದು. ಆದರೆ ಇಲ್ಲಿ ನಾವು ಗಮನಿಸಬೇಕಾದ ಚಾರಿತ್ರಿಕ ಸಂಗತಿ ಎಂದರೆ, ಮಹಾವೀರನು ಆರಂಭದಲ್ಲಿ ಸ್ತ್ರೀಯರಿಗೆ ಸಂಘ ಪ್ರವೇಶವನ್ನು ನಿರಾಕರಿಸಿದ್ದ ಎಂಬುದು ತಿಳಿದು ಬರುತ್ತದೆ. ನಂತರದಲ್ಲಿ ಶಿಷ್ಯರ ಒತ್ತಾಯದ ಮೇರೆಗೆ ನಂತರ ಪ್ರವೇಶ ನೀಡಲಾಯಿತು ಎಂದು ತಿಳಿದುಬರುತ್ತದೆ. ಈ ಸಂಗತಿಯನ್ನು ನಾವು ಒಂದು ಸಾಮಾಜಿಕ ಪ್ರಕ್ರಿಯೆಯಾಗಿ ವ್ಯಾಖ್ಯಾನಿಸಿದರೆ, ಜೈನ ಧರ್ಮದೊಳಗೂ ಕೂಡ ಸ್ತ್ರೀ ಶಿಕ್ಷಣದ ಪರಿಕಲ್ಪನೆ ಒಂದು ಹಂತಹಂತದ ವಿಕಾಸದ ಫಲವಾಗಿ ಮೂಡಿಬಂತೇ ಹೊರತು ಆರಂಭದಿಂದಲೇ ಸಿದ್ಧ ಸ್ವರೂಪದಲ್ಲಿ ಇರಲಿಲ್ಲ ಎಂಬುದು ಕೂಡ ನಮಗೆ ಸ್ಪಷ್ಟವಾಗಿ ತಿಳಿದುಬರುತ್ತದೆ.

**ಬಸದಿ-ಚೈತ್ಯಾಲಯಗಳು ಶಿಕ್ಷಣ ಕೇಂದ್ರಗಳಾಗಿ ರೂಪುಗೊಂಡ ಬಗೆ**

ವೈದಿಕರ ಅಗ್ರಹಾರ, ಬ್ರಹ್ಮಪುರಿ, ಘಟಿಕಾಲಯಗಳಿಗೆ ಸಮಾನಾಂತರವಾಗಿ ಜೈನರ ಜಿನಾಲಯ, ಬಸದಿ, ಚೈತ್ಯಾಲಯಗಳು ಶಿಕ್ಷಣ ಕೇಂದ್ರಗಳಾಗಿ ರೂಪುಗೊಂಡವು. ಇವು ಆರಂಭದಲ್ಲಿಯೇ ಜೈನ ಯತಿಗಳು ತಂಗುವ ತಾತ್ಕಾಲಿಕ ತಾಣಗಳಾಗಿದ್ದವು. ಕ್ರಮೇಣವಾಗಿ ಅವುಗಳು ಮುನಿಗಳ ಮತ್ತು ಆಚಾರ್ಯರ ಸಲುವಾಗಿಯೇ ಶಾಶ್ವತವಾಗಿ ಕಟ್ಟಿಸಲಾದಂತಹ ಸ್ಥಳಗಳಾಗಿ ಮಾರ್ಪಟ್ಟವು. ಬರುಬರುತ್ತ ಮುಂದೆ ಇವುಗಳೆ ಕಲಿಕಾ ಕೇಂದ್ರಗಳಾಗಿ ಬದಲಾವಣೆಗೊಂಡವು. ಇಂತಹ ಅನೇಕ ಬಸದಿಗಳನ್ನು ಕಟ್ಟಿಸುವುದರಿಂದ ರಾಜರ ಮತ್ತು ಪ್ರಜೆಗಳಿಗೆ ಆಯಸ್ಸು, ಐಶ್ವರ್ಯ ವೃದ್ಧಿಯನ್ನು ಹೊಂದುತ್ತವೆ ಎಂಬ ಧಾರ್ಮಿಕ ಗಾಢವಾದ ನಂಬಿಕೆಯನ್ನು ಹೊಂದಿದ್ದರ ಕಾರಣದಿಂದ ಅಂದಿನ ರಾಜ, ರಾಣಿ, ಮಂತ್ರಿಗಳು ಮತ್ತು ಅತೀ ಶ್ರೀಮಂತರನ್ನು ಜೈನ ಬಸದಿಗಳನ್ನು ನಿರ್ಮಾಣಕ್ಕೆ ಪ್ರೇರೇಪಿಸಿರುವಂತಹ ಅಂಶವು ನಮಗೆ ತಿಳಿಯುತ್ತದೆ.

ಈ ಧಾರ್ಮಿಕ ನಂಬಿಕೆಯನ್ನು ಒಂದು ಸಾಮಾಜಿಕ–ಆರ್ಥಿಕ ಕಾರ್ಯವಿಧಾನವಾಗಿಯೂ (mechanism) ಕೂಡ ನಾವಿಲ್ಲಿ ನೋಡಬಹುದಾಗಿದೆ. ಇದು ಶಿಕ್ಷಣ ಸಂಸ್ಥೆಗಳ ನಿರಂತರ ಆರ್ಥಿಕ ಪೋಷಣೆಗೆ ಒಂದು ಸುಸ್ಥಿರ ಮತ್ತು ಸ್ವಯಂಚಾಲಿತ ವ್ಯವಸ್ಥೆಯನ್ನು ಸೃಷ್ಟಿಸಿತು. ಪ್ರತಿಯೊಬ್ಬ ಹೊಸ ಪೋಷಕನೂ ಕೂಡ ಪುಣ್ಯದ ಆಸೆಯಿಂದ ಹೊಸ ಬಸದಿಗಳನ್ನು ಅಥವಾ ದತ್ತಿಗಳನ್ನು ನೀಡುತ್ತಿದ್ದುದರಿಂದ, ಶಿಕ್ಷಣ ವ್ಯವಸ್ಥೆಗೆ ರಾಜಕೀಯ ಬದಲಾವಣೆಗಳಾಚೆಗೂ ಸಾಂತತ್ಯ ದೊರಕುತ್ತಿತ್ತು ಎಂಬುದು ಕಂಡುಬರುತ್ತದೆ.

ಬಸದಿಗಳ ನಾಮಕರಣ ಪದ್ಧತಿಯನ್ನು ನಾವು ಗಮನಿಸಿದಾಗ, ಇವುಗಳು ಹೊಂದಿರುವ ಸಾಮಾಜಿಕ ಸಂಬಂಧದ ಆಳವು ಸ್ಪಷ್ಟವಾಗುತ್ತದೆ. ಸಾಮಾನ್ಯವಾಗಿ 'ಬಸದಿ'[9], 'ಕೊಯಿಲ್ ಬಸದಿ'[10], 'ಚೈತ್ಯಾಲಯ'[11], 'ಜಿನಾಲಯ'[12] ಎಂದು ಸಾಮಾನ್ಯ ಹೆಸರುಗಳಿಂದ ಕರೆದರೆ, ಕೆಲವನ್ನು ತೀರ್ಥಂಕರರ ಹೆಸರಿನಿಂದ ('ನೇಮಿನಾಥ ಬಸದಿ'[13], 'ಪಾರ್ಶ್ವನಾಥ ಬಸದಿ'[14], 'ಶಾಂತಿನಾಥ ಬಸದಿ'[15]) ಮತ್ತೆ ಕೆಲವನ್ನು ಕಟ್ಟಿಸಿದವರ ಹೆಸರಿನಿಂದ ('ಬೊಪ್ಪಣ್ಣ ಚೈತ್ಯಾಲಯ'[16], 'ಸವತಿ ಗಂಧಾವರಣ ಜಿನಾಲಯ'[17], 'ನಿರವೈದ್ಯ ಜಿನಾಲಯ'[18], 'ಪೆರ್ಮಾಡಿ ಜಿನಾಲಯ'[19], 'ನಾಗಗಾವುಂಡ ಬಸದಿ'[20]) ಕರೆಯುತ್ತಿದ್ದುದು ನಮಗೆ ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ಈ ನಾಮಕರಣ ಪದ್ಧತಿಯು ಕೇವಲ ಒಂದು ಭಾಷಾ ಸಂಪ್ರದಾಯವಲ್ಲ. ಬದಲಿಗೆ ಇದೊಂದು ದಾನಿಯ ಹೆಸರನ್ನೇ ಶಾಶ್ವತವಾಗಿ ಸಂಸ್ಥೆಗೆ ಜೋಡಿಸುವ ಮೂಲಕ ಸಾಮಾಜಿಕ ಪ್ರತಿಷ್ಠೆ ಮತ್ತು ಆರ್ಥಿಕ ಪೋಷಣೆಯ ನಡುವೆ ನೇರ ಸಂಬಂಧ ಕಲ್ಪಿಸುವ ಒಂದು ಸಾಂಸ್ಥಿಕ ತಂತ್ರವಾಗಿಯೂ ಕೂಡ ಕೆಲಸ ಮಾಡುತ್ತಾ ಬಂದಿದೆ ಎಂದು ನಾವು ವ್ಯಾಖ್ಯಾನಿಸಬಹುದು.

ಕೇವಲ ಸಾಂಕೇತಿಕವಾಗಿ ಈ ಬಸದಿಗಳು ವಿದ್ಯಾಕೇಂದ್ರಗಳಾಗಿರದೆ, "ವಾಸ್ತವದಲ್ಲಿ ಇವು ಪ್ರಸಿದ್ಧ ಅಧ್ಯಯನ ಕೇಂದ್ರಗಳಾಗಿ ಇದ್ದವು ಎಂಬುದಕ್ಕೆ ಇಂದಿನ ಸೇಡಂನ ಮಾನ್ಯಖೇಟ (ಘಟಿಕಾಸ್ಥಾನ) (ಇಂದಿನ ಮಳಖೇಡ) ಊರಿನಲ್ಲಿ ಹದಿನಾಲ್ಕು ಜೈನ ಬಸದಿಗಳಿರುವ ಅಂಶವು ನಮಗೆ ತಿಳಿದುಬರುತ್ತದೆ. ಮತ್ತು ಅಷ್ಟೇ ಸಂಖ್ಯೆಯಲ್ಲಿ ಅಲ್ಲಿ ಪೆಟ್ಟಿಗೆಗಳ ಸಂಪೂರ್ಣ ಧಾರ್ಮಿಕ ಗ್ರಂಥಗಳು ಇದ್ದವು ಎಂಬ ಮಾತು"[21] ಸಾಕ್ಷಿಯಾಗಿ ನೋಡಬಹುದು. ನಯಸೇನನ ಧರ್ಮಾಮೃತದಲ್ಲಿ ಒಬ್ಬ ದೊರೆ ತನ್ನ ಮಗನನ್ನು ಬಸದಿಗೆ ಓದಲು ಕಳುಹಿಸುವ ಪ್ರಸ್ತಾಪ[22] ಬರುತ್ತದೆ. ಈ ಬಸದಿಗಳು ಕೇವಲ ಸಾಮಾನ್ಯ ಜನರಿಗೂ, ರಾಜಮನೆತನದ ಮಕ್ಕಳಿಗೂ ಸಮಾನವಾಗಿ ತೆರೆದಿದ್ದ ವಿದ್ಯಾಕೇಂದ್ರಗಳಾಗಿದ್ದವು ಎಂಬುದನ್ನು ಈ ಮೂಲಕ ಸಾಬೀತುಪಡಿಸುತ್ತದೆ. ಇದು ಅಲ್ಲದೆ "ಗುರುಗಳು ತಮ್ಮ ಸ್ವಂತ ಮನೆಗಳಲ್ಲಿಯೂ ವಿದ್ಯಾದಾನ ಮಾಡುತ್ತಿದ್ದ ಪದ್ಧತಿ ಇತ್ತೆಂಬುದಕ್ಕೆ ಲಕ್ಷ್ಮೇಶ್ವರದ ಕ್ರಿ.ಶ. 730ರ ಶಾಸನದಲ್ಲಿ ಉದಯದೇವ ಪಂಡಿತನು ಪೂಜ್ಯಪಾದನ ಗೃಹ ವಿದ್ಯಾರ್ಥಿಯಾಗಿದ್ದ ಉಲ್ಲೇಖ"[23] ನಮಗೆ ಸಿಗುತ್ತದೆ. ಹಾಗೂ "ವಡ್ಡಾರಾಧನೆಯ ಸುಕುಮಾರಸ್ವಾಮಿ ಕಥೆಯಲ್ಲಿ ಸೂರ್ಯಮಿತ್ರನು ಪ್ರತಿಫಲಾಪೇಕ್ಷೆಯಿಲ್ಲದೆ ತನ್ನ ಮನೆಯಲ್ಲಿ ವಿದ್ಯಾರ್ಥಿಗಳಿಗೆ ಪಾಠ ಹೇಳಿದ ಪ್ರಸಂಗ"[24], ಹಾಗೂ "ಆತನ ಶಿಷ್ಯ ವಾಯುಭೂತಿ ಸ್ವತಃ 'ಲೋಹಾಸನ'ದ ಮೇಲೆ ಕುಳಿತು

ಶಿಷ್ಯರಿಗೆ ಪಾಠ ಮಾಡಿದ ವಿವರ"[25] ಉಲ್ಲೇಖವಾಗಿ ನಿಲ್ಲುತ್ತವೆ. ಈ ಎಲ್ಲ ಆಕರಗಳಿಂದ ನಮಗೆ ಜೈನ ಶಿಕ್ಷಣ ವ್ಯವಸ್ಥೆಯು ಬಸದಿ–ಆಧಾರಿತ ಸಾಂಸ್ಥಿಕ ಶಿಕ್ಷಣ ಮತ್ತು ಗುರುಮನೆ–ಆಧಾರಿತ ವೈಯಕ್ತಿಕ ಶಿಕ್ಷಣ ಎಂಬ ಎರಡು ಸಮಾನಾಂತರ ವ್ಯವಸ್ಥೆಗಳ ಮೂಲಕ ಕಾರ್ಯನಿರ್ವಹಿಸುತ್ತಿತ್ತು ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಜೈನರ ಈ ಪದ್ಧತಿಯು ವೈದಿಕರ ಗುರುಕುಲ ಪದ್ಧತಿಗೆ ಸರಿ ಸಮಾನಾಂತರವಾಗಿಯೇ ಇರುವಂತೆ ಕಂಡರೂ ಇದರಲ್ಲಿ ವಿಶಾಲವಾದ ಸಾಮಾಜಿಕ ಪ್ರವೇಶದೊಂದಿಗೆ ಬೆಳವಣಿಗೆ ಹೊಂದಿದಂತಹ ಶೈಕ್ಷಣಿಕ ವ್ಯವಸ್ಥೆಯಾಗಿತ್ತು ಎಂಬುದನ್ನು ನಾವು ಮಹತ್ವದ್ದಾಗಿ ನೋಡಬಹುದು.

**ವಿದ್ಯಾಭ್ಯಾಸದ ಆರಂಭ ಮತ್ತು ಗುರು–ಶಿಷ್ಯ ಪರಿಭಾಷೆ**

ವೈದಿಕರಲ್ಲಿ ಉಪನಯನ ಕಾರ್ಯಕ್ರಮದ ನಂತರದಲ್ಲಿ ವಿದ್ಯಾಭ್ಯಾಸ ಆರಂಭವಾದರೆ, ಐದನೆಯ ಅಥವಾ ಆರನೆಯ ವರ್ಷಕ್ಕೇ ಜೈನರಲ್ಲಿ ಶಿಕ್ಷಣ ಆರಂಭಿಸುತ್ತಿದ್ದರು ಎಂಬುದು ವಡ್ಡಾರಾಧನೆ ಕತೆ 'ವಿದ್ಯುಚ್ಚೋರ ಋಷಿಯ ಕಥೆ' ಮತ್ತು 'ಗುರುದತ್ತಾಭಟಾರರ ಕಥೆ' ಈ ಎರಡು ಕಥೆಗಳಿಂದ ತಿಳಿಯುತ್ತದೆ. ಏಳು ವರ್ಷಗಳ ಅವಧಿಯಲ್ಲಿ ಅರವತ್ತನಾಲ್ಕು ಕಲೆಗಳನ್ನೂ, ಎಪ್ಪತ್ತೆರಡು ವಿಜ್ಞಾನಗಳನ್ನೂ ಕಲಿಯುತ್ತಿದ್ದರೆಂಬ ವಿವರಗಳು ಈ ಶಿಕ್ಷಣ ಪದ್ಧತಿಯ ತೀವ್ರತೆ ಮತ್ತು ವ್ಯಾಪ್ತಿಯನ್ನು ಸೂಚಿಸುತ್ತದೆ. "ಜ್ಞಾನಚಂದ್ರ ಚರಿತೆ'ಯ 'ವರುಷವೈದಾಗಲು ಜಿನಪೂಜೆಯ ಮಾಡಿ ವರ ಗುರುಗಳ ಸಮೀಪದೊಳು..." ಎಂಬ ಪದ್ಯ ಸಾಲುಗಳು[26] ನಮಗೆ ಐದನೇ ವಯಸ್ಸಿನಲ್ಲಿಯೇ ಜಿನಪೂಜೆಯ ಜೊತೆಗೆಯೇ ಗುರುಗಳ ಬಳಿ ಅಕ್ಷರಾಭ್ಯಾಸ ಆರಂಭವಾಗುತ್ತಿದ್ದ ಬಗ್ಗೆ ಸಾಕ್ಷ್ಯ ಒದಗಿಸುತ್ತವೆ.

ಇಲ್ಲಿ ಗಮನಾರ್ಹ ಸಂಗತಿಯೆಂದರೆ, ಜೈನ ಗುರುಗಳಿಗೆ 'ತಮ್ಮಡಿ'[27], 'ವೋಜ', 'ಉಪಾಧ್ಯಾಯ'[28], 'ಆಚಾರ್ಯ'[29], 'ಗುರುವಡಿಗಳ್', 'ಗೊರವಿ', 'ಭಟ್ಟಾರಕ' ಎನ್ನುವಂತಹ ಬಹುಸಂಖ್ಯೆಯ ಪದನಾಮಗಳಿದ್ದವು. ಆದರೆ ಇಲ್ಲಿ ಇವುಗಳ ನಡುವಿನ ಶ್ರೇಣಿಗತವಾಗಿರುವಂತಹ ವ್ಯತ್ಯಾಸವನ್ನು ಶಾಸನ ಅಥವಾ ಸಾಹಿತ್ಯಕ ಆಕರಗಳಿಂದ ನಮಗೆ ಸ್ಪಷ್ಟವಾಗಿ ಕಾಣುವುದಿಲ್ಲ. 'ತಮ್ಮಡಿ' ಮತ್ತು 'ಗೊರವಿ' ಎಂಬ ಈ ಪದಗಳು ಜೈನ ಧರ್ಮದವರಿಗಿಂತ ಹೆಚ್ಚು ಶೈವರಲ್ಲಿ ಧರ್ಮೀಯರಲ್ಲಿ ಬಳಕೆಯಲ್ಲಿದ್ದವು ಎಂಬಂತಹ ಮಾತು ಎಚ್. ಆರ್. ದೇಸಾಯಿಯವರ ಗುರುತಿಸುವಿಕೆಯನ್ನು ನಾವು ಗಮನಿಸಿದಾಗ, ಈ ಪದನಾಮಗಳ ಬಳಕೆ ಪಂಥೀಯ ಗಡಿಗಳನ್ನು ಮೀರಿ ಪ್ರಾದೇಶಿಕ–ಸಾಂಸ್ಕೃತಿಕ ಸಮ್ಮಿಶ್ರಣದ ಫಲವಾಗಿ ರೂಪುಗೊಂಡಿತ್ತೆಂದು ನಮಗೆ ಊಹಿಸಲು ಅವಕಾಶವಿದೆ. ಇದೇ ರೀತಿಯಲ್ಲಿ ವಿದ್ಯಾರ್ಥಿಗಳನ್ನು 'ಅಂತೇವಾಸಿ'[30], 'ಮಾಣಿ'[31], 'ಗುಡ್ಡ'[32], 'ಶಿಷ್ಯ'[33], 'ವಿದ್ಯಾರ್ಥಿ'[34] ಎಂದೂ, ವಿದ್ಯಾರ್ಥಿನಿಯರನ್ನು 'ಗುಡ್ಡಿ'[35], 'ಶಿಷ್ಯೆ'[36], 'ಕಂತಿ'[37], 'ಗಂತಿ'[38] ಎಂದೂ ಕರೆಯಲಾಗುತ್ತಿತ್ತು. 'ಅಂತೇವಾಸಿ' ಎಂಬ ಪದ ವೈದಿಕ ಗುರುಕುಲ ಪದ್ಧತಿಯ ಕುರುಹೆಂಬುದು ಚಿದಾನಂದಮೂರ್ತಿಯವರು ಗುರುತಿಸಿದ್ದರೂ,[39] ಕರ್ನಾಟಕದಲ್ಲಿ

ಈ ಪದ ವೈದಿಕ ಶಾಸನಗಳಿಗಿಂತ ಜೈನ ಶಾಸನಗಳಲ್ಲಿಯೇ ಹೆಚ್ಚಾಗಿ ಕಂಡುಬರುತ್ತದೆ.[40] ಈ ಅಂಶ ಒಂದು ಕುತೂಹಲಕಾರಿ ಚಾರಿತ್ರಿಕ ವಿಪರ್ಯಾಸವನ್ನು (irony) ನಮಗೆ ಎತ್ತಿ ತೋರಿಸುತ್ತದೆ. ಮೂಲತಃ ವೈದಿಕ ಪರಿಭಾಷೆಯಾಗಿದ್ದ ಪದವೊಂದು, ಜೈನರು ವಿದ್ಯಾರ್ಥಿಗಳನ್ನು ತಮ್ಮ ತಮ್ಮ ಮನೆಯಲ್ಲೇ ಇಟ್ಟುಕೊಂಡು ಪೋಷಿಸುತ್ತಿದ್ದ ಪದ್ಧತಿಯ ಕಾರಣದಿಂದಾಗಿ ಜೈನ ಶಾಸನಗಳಲ್ಲೇ ಹೆಚ್ಚು ಜೀವಂತವಾಗಿ ಉಳಿದುಕೊಂಡಿತು.

ಅಂದಿನ ಸಂದರ್ಭದಲ್ಲಿ ಈ ವಿದ್ಯಾಕೇಂದ್ರಗಳಿಗೆ ಇಷ್ಟೇ ವಿದ್ಯಾರ್ಥಿಗಳು ಇರಬೇಕೆಂಬಂತಹ ನಿಯಮವೇನು ಇರಲಿಲ್ಲ ಎಂದು ನಮಗೆ ತಿಳಿಯುತ್ತದೆ. ಆಯಾ ಗುರುಗಳ ಅವರ ಸಾಮರ್ಥ್ಯಕ್ಕೆ ತಕ್ಕಂತೆ ವಿದ್ಯಾರ್ಥಿಗಳ ಸಂಖ್ಯೆ ಇಪ್ಪತ್ತೆಂಟರಿಂದ ಮುನ್ನೂರರವರೆಗೆ ಇದ್ದಂತಹ ಉಲ್ಲೇಖಗಳು ಸಿಗುತ್ತವೆ. ಶ್ರವಣಬೆಳಗೊಳದಲ್ಲಿ ಕ್ರಿ.ಶ. 1100ರ ಸಂದರ್ಭದ ಶಾಸನದಲ್ಲಿ ಚತುರ್ಮುಖನೆಂಬ ಅಧ್ಯಾಪಕನ ಬಳಿ 84 ವಿದ್ಯಾರ್ಥಿಗಳಿದ್ದರು ಎಂಬ ಉಲ್ಲೇಖವು[41], ಗುಣನಂದಿ ಪಂಡಿತ ಯತಿಗೆ 300 ಶಿಷ್ಯರಿದ್ದು ಅವರು ತರ್ಕ, ವ್ಯಾಕರಣ, ಸಾಹಿತ್ಯ, ಆಗಮ ಮತ್ತು ಚರ್ಚೆಗಳಲ್ಲಿ ಪಂಡಿತರಾಗಿದ್ದ ಉಲ್ಲೇಖ[42] ಮತ್ತು ಕನಕಶ್ರೀ ಕಂತಿಗೆ 28 ಶಿಷ್ಯರಿದ್ದ ಉಲ್ಲೇಖಗಳು[43] ನಮಗೆ ಸಿಗುತ್ತವೆ. ಇವೆಲ್ಲವನ್ನು ಗಮನಿಸಿದಾಗ ಜೈನ ಧರ್ಮವು ವಿದ್ಯಾಕೇಂದ್ರಗಳ ಗಾತ್ರ ಗುರುವಿನ ಪಾಂಡಿತ್ಯ ಮತ್ತು ಖ್ಯಾತಿಗೆ ಅನುಗುಣವಾಗಿಯೇ ಗಣನೀಯವಾಗಿ ಬದಲಾಗುತ್ತಿತ್ತು ಎಂಬುದೂ, ಮತ್ತು ಸ್ತ್ರೀ ಗುರುಗಳೂ ಶಿಷ್ಯ ಸಮುದಾಯವನ್ನು ಮುನ್ನಡೆಸುತ್ತಿದ್ದರೆಂಬುದೂ ನಮಗಿಲ್ಲಿ ಸ್ಪಷ್ಟವಾಗುತ್ತದೆ.

**ಬೋಧನಾ ವಿಧಾನ ಮತ್ತು ಗುರು-ಶಿಷ್ಯ ಸಂಬಂಧ**

ಜೈನರ ಬೋಧನಾ ಪದ್ಧತಿ ವೈಜ್ಞಾನಿಕ ನೆಲೆಯುಳ್ಳದ್ದಾಗಿತ್ತು ಎಂಬುದನ್ನು ಎಸ್.ಬಿ. ಡಿಯೋ ಅವರು ಮಾಡಿರುವ ವರ್ಗೀಕರಣವು ನಮಗೆ ತಿಳಿಸುತ್ತದೆ. ವಾಚನ (ಓದುವುದು), ಪ್ರಜ್ಞಾನ (ಪ್ರಶ್ನಿಸುವುದು), ಅನುಪ್ರೇಕ್ಷಾ (ಚಿಂತನಶೀಲತೆ), ಆಮ್ನಾಯ (ಭಾಗಶಃ ಕಲಿಕೆ) ಮತ್ತು ಧರ್ಮಪಾಲೇಸಾ (ಜನಸಾಮಾನ್ಯರಿಗೆ ಬೋಧನೆ)[44] ಎಂಬ ಐದು ಹಂತಗಳ ಈ ವಿಧಾನ, ಕೇವಲ ಕಂಠಪಾಠಕ್ಕೆ ಸೀಮಿತವಾಗದೆ ಪ್ರಶ್ನೆ-ಚಿಂತನೆ-ಪ್ರಸಾರ ಎಂಬ ಸಮಗ್ರ ಜ್ಞಾನಾರ್ಜನೆಯ ಚಕ್ರವನ್ನು ಒಳಗೊಂಡಿತ್ತು ಎಂಬುದನ್ನು ಸೂಚಿಸುತ್ತದೆ. ಇದರ ಜೊತೆಗೆ 'ಸಂವಾದ' ಮತ್ತು 'ಚರ್ಚೆ'ಯ ವಿಧಾನಗಳೂ ಪ್ರಮುಖ ಪಾತ್ರವಹಿಸಿದ್ದವು. ಪ್ರಸಿದ್ ಆಚಾರ್ಯ ಅಕಳಂಕನು ಬೌದ್ಧ ಸನ್ಯಾಸಿಯನ್ನು ವಾಗ್ವಾದದಲ್ಲಿ ಸೋಲಿಸಿದ ಹಾಗೂ ದೇವಕೀರ್ತಿ ಪಂಡಿತನು ಚಾರ್ವಾಕರು, ಬೌದ್ಧರು, ಕಾಪಾಲಿಕರು ಮತ್ತು ವೈಶೇಷಿಕರನ್ನು ಚರ್ಚೆಯಲ್ಲಿ ಸೋಲಿಸಿದ ಉಲ್ಲೇಖ[45] ಜೈನ ಶಿಕ್ಷಣ ಪದ್ಧತಿ ಕೇವಲ ಆಂತರಿಕ ಜ್ಞಾನಾರ್ಜನೆಗೆ ಸೀಮಿತವಾಗಿರದೆ, ಸಾರ್ವಜನಿಕ ವೈಚಾರಿಕ ಸ್ಪರ್ಧೆಯ ಮೂಲಕ ತನ್ನ ಸಿದ್ಧಾಂತವನ್ನು ಸಾಬೀತುಪಡಿಸುವ ಸ್ಪರ್ಧಾತ್ಮಕ ಆಯಾಮವನ್ನೂ ಹೊಂದಿತ್ತು ಎಂಬುದನ್ನು ತೋರಿಸುತ್ತದೆ. ಎಚ್. ಬಿ. ಜೈನರ ಪ್ರಕಾರ ಬೋಧನೆ ನಿರಂತರ, ಪುನರಾವರ್ತಿತ ಮತ್ತು ವಿವರಣಾತ್ಮಕವಾಗಿರಬೇಕಿತ್ತು[46] ಎಂಬ ತತ್ವ, ವಿದ್ಯಾರ್ಥಿಯ ಗ್ರಹಣ ಸಾಮರ್ಥ್ಯಕ್ಕೆ ಅನುಗುಣವಾಗಿ ಬೋಧನಾ

ವೇಗವನ್ನು ಹೊಂದಿಸಿಕೊಳ್ಳುವ ಒಂದು ವಿದ್ಯಾರ್ಥಿ-ಕೇಂದ್ರಿತ ಶಿಕ್ಷಣ ತತ್ವಶಾಸ್ತ್ರವನ್ನೇ ಸೂಚಿಸುತ್ತದೆ. ಆದರೆ ಕನ್ನಡ ಶಾಸನಗಳು ಈ ಬೋಧನಾ ವಿಧಾನದ ಕುರಿತು ಬಹುತೇಕ ಮೌನವಹಿಸಿರುವುದರಿಂದ, ಈ ಎಲ್ಲ ವಿವರಗಳಿಗೆ ಸಂಸ್ಕೃತ/ಪ್ರಾಕೃತ ಮೂಲದ ಜೈನ ಗ್ರಂಥಗಳೇ ಆಧಾರವಾಗಿ ಉಳಿಯುತ್ತವೆ; ಇದೊಂದು ಗಮನಾರ್ಹ ಆಕರ ಮಿತಿ.

ಗುರು-ಶಿಷ್ಯ ಸಂಬಂಧವನ್ನು ಎಚ್. ಬಿ. ಜೈನರು ಒಳ್ಳೆಯ ಕುದುರೆ ಸವಾರಿ ಮಾಡುವ ಸವಾರನ ಸಂತೋಷ ಮತ್ತು ಒಳ್ಳೆಯ ಶಿಷ್ಯನನ್ನು ಕಲಿಸುವ ಗುರುವಿನ ಸಂತೋಷಕ್ಕೆ ಹೋಲಿಸಿ, ಗುರು-ಶಿಷ್ಯ ಬಾಂಧವ್ಯ ತಂದೆ-ಮಗನ ಅಥವಾ ಅಣ್ಣ-ತಮ್ಮಂದಿರ ಸಂಬಂಧದಂತೆ ಇರಬೇಕೆಂದು ವಿವರಿಸಿದ್ದಾರೆ. ಶಾಸನಗಳಲ್ಲಿ ಕಂಡುಬರುವ 'ಅಂತೇವಾಸಿ'[47] ಮತ್ತು 'ಛಾತ್ರ'[48] ಎಂಬ ಪದಗಳಿಂದ ವಿದ್ಯಾರ್ಥಿ-ಅಧ್ಯಾಪಕರು ಒಂದೇ ಸೂರಿನಡಿ ವಾಸಿಸುತ್ತಿದ್ದ ಬಗ್ಗೆ ಊಹಿಸಬಹುದು. ವಡ್ಡಾರಾಧನೆಯ ಸುಕುಮಾರಸ್ವಾಮಿ ಕಥೆಯಲ್ಲಿ ಅಗ್ನಿಭೂತಿ-ವಾಯುಭೂತಿಯರನ್ನು ಸೂರ್ಯಮಿತ್ರ ಹಗಲಿರುಳು ನಿರಂತರವಾಗಿ ಏಳೆಂಟು ವರ್ಷಗಳ ಕಾಲ ಬೋಧಿಸಿದ[49] ವಿವರ ಈ ಸಹಜೀವನ ಪದ್ಧತಿಯ ದೀರ್ಘಾವಧಿಯ ಸ್ವರೂಪವನ್ನು ದೃಢಪಡಿಸುತ್ತದೆ. ಆದರೆ ಈ ಬಾಂಧವ್ಯ ಸಂಪೂರ್ಣ ಸೌಮ್ಯವಾಗಿರಲಿಲ್ಲ; ವಿದ್ಯಾರ್ಥಿಗಳಿಗೆ ಕಠಿಣ ನಿಯಮ ಪಾಲಿಸಬೇಕೆಂಬ ಷರತ್ತು[50] ಹಾಗೂ ಭಿಕ್ಷಾನ್ನದ ಜೊತೆ ಎಣ್ಣೆ-ಉಪ್ಪು ಸಹ ನೀಡದಂತಹ ಕಠಿಣ ಜೀವನಕ್ರಮದ ಬಗ್ಗೆ ವಾಯುಭೂತಿಯ ಸಿಡುಕಿನ ಉಲ್ಲೇಖ[51] ಜೈನ ವಿದ್ಯಾರ್ಥಿ ಜೀವನ ಎಷ್ಟು ತಪಸ್ವಿ ಶಿಸ್ತಿನಿಂದ ಕೂಡಿತ್ತು ಎಂಬುದನ್ನು ದೃಢಪಡಿಸುತ್ತದೆ. ಈ ಕಠಿಣತೆಯನ್ನು ಆಧುನಿಕ ದೃಷ್ಟಿಕೋನದಿಂದ ನೋಡಿದಾಗ ಕಠೋರವೆನಿಸಿದರೂ, ಜೈನ ಸಂಘದ ತಪಸ್ಸು-ಕೇಂದ್ರಿತ ಜೀವನಕ್ರಮಕ್ಕೆ ಶಿಕ್ಷಣವನ್ನೂ ಹೊಂದಿಸಿಕೊಂಡ ಒಂದು ಸಮಗ್ರ ಜೀವನ ವಿಧಾನವಾಗಿ ಅರ್ಥೈಸುವುದೇ ಹೆಚ್ಚು ನ್ಯಾಯಸಮ್ಮತ.

**ಪಠ್ಯಕ್ರಮದ ವ್ಯಾಪ್ತಿ : ಧಾರ್ಮಿಕ ಮತ್ತು ಜಾತ್ಯತೀತ ಜ್ಞಾನದ ಸಂಗಮ**

ಜೈನ ವಿದ್ಯಾಕೇಂದ್ರಗಳ ಪಠ್ಯಕ್ರಮದ ಅತ್ಯಂತ ಗಮನಾರ್ಹ ಲಕ್ಷಣವೆಂದರೆ, ಇದು ಕೇವಲ ಧಾರ್ಮಿಕ ಗ್ರಂಥಗಳಿಗೆ ಸೀಮಿತವಾಗಿರದೆ ಜಾತ್ಯತೀತ ವಿಷಯಗಳಿಗೂ ಸಮಾನ ಮಹತ್ವ ನೀಡಿತ್ತು. ತೀರ್ಥಂಕರರ ಜೀವನಚರಿತ್ರೆಗಳಿಗೆ ನೀಡಿದ ಪ್ರಾಶಸ್ತ್ಯದ[52] ಜೊತೆಗೆಯೇ, ಸುಕುಮಾರಸ್ವಾಮಿ ಕಥೆಯಲ್ಲಿ ಉಲ್ಲೇಖಿತ ನಾಲ್ಕು ವೇದ, ಹದಿನೆಂಟು ಧರ್ಮಶಾಸ್ತ್ರ, ಮೀಮಾಂಸಾ, ನ್ಯಾಯ, ವ್ಯಾಕರಣ, ಛಂದಸ್ಸು, ಅಲಂಕಾರ, ನಿಘಂಟು, ಕಾವ್ಯ, ನಾಟಕ[53] ಮುಂತಾದ ವಿಷಯಗಳನ್ನೂ, 'ವಿದ್ಯುಚ್ಚೋರನೆಂಬ ಋಷಿಯ ಕಥೆ'ಯಲ್ಲಿ ಉಲ್ಲೇಖಿತ ಸಾಮುದ್ರಿಕ, ವಾತ್ಸಾಯನ, ಶಾಲಿಹೋತ್ರ, ಚಾಣಕ್ಯ, ವೈದ್ಯ[54] ಮುಂತಾದ ಪ್ರಾಯೋಗಿಕ ವಿಷಯಗಳನ್ನೂ[55], ಕಳ್ಳತನ ಪತ್ತೆಹಚ್ಚುವ 'ಸುರಖ' ಮತ್ತು 'ಕರಪಟ ಶಾಸ್ತ್ರ'ದಂತಹ ಅಪೂರ್ವ ವಿಷಯಗಳನ್ನೂ ಕಲಿಸಲಾಗುತ್ತಿತ್ತು ಎಂಬುದು ಪಠ್ಯಕ್ರಮದ ಅಸಾಧಾರಣ ವೈವಿಧ್ಯವನ್ನು ತೋರಿಸುತ್ತದೆ. ಒಂದೇ ಪಠ್ಯಕ್ರಮದೊಳಗೆ

ಧಾರ್ಮಿಕ ತತ್ವಶಾಸ್ತ್ರ, ವ್ಯಾಕರಣ–ಛಂದಸ್ಸಿನಂತಹ ಭಾಷಾಶಾಸ್ತ್ರ, ವೈದ್ಯದಂತಹ ವಿಜ್ಞಾನ ಮತ್ತು ಕಳ್ಳತನ ಪತ್ತೆಯಂತಹ ಪ್ರಾಯೋಗಿಕ ಕೌಶಲಗಳನ್ನು ಒಟ್ಟುಗೂಡಿಸಿದ್ದು, ಜೈನ ಶಿಕ್ಷಣ ವ್ಯವಸ್ಥೆ ಸಂಪೂರ್ಣ ವ್ಯಕ್ತಿತ್ವ ವಿಕಸನ (holistic development) ಎಂಬ ಆಧುನಿಕ ಪರಿಕಲ್ಪನೆಗೆ ಸಮಾನಾಂತರವಾದ ಒಂದು ವಿಶಾಲ ಶೈಕ್ಷಣಿಕ ದೃಷ್ಟಿಕೋನ ಹೊಂದಿತ್ತು ಎಂಬುದನ್ನು ಸೂಚಿಸುತ್ತದೆ.

ಶಾಸನಗಳಲ್ಲಿ ಜೈನ ಆಚಾರ್ಯರನ್ನು ಗೌರವಿಸುವಾಗ 'ತ್ರೈವಿದ್ಯ'[56], 'ತ್ರೈವಿದ್ಯಾ ಚೂಡಾಮಣಿ', 'ತ್ರೈವಿದ್ಯಾರತ್ನಾಕರ'[57], 'ತ್ರೈವಿದ್ಯಾಯೋಗೀಶ್ವರ'[58], 'ತ್ರೈವಿದ್ಯಾದೇವ'[59], 'ತ್ರೈವಿದ್ಯಾಚಕ್ರೇಶ್ವರ'[60], 'ತ್ರಿವಿದ್ಯೋತ್ತಮ' ಎಂಬ ಬಿರುದುಗಳನ್ನು ಬಳಸಿರುವುದನ್ನು ಕಾಣಬಹುದು. ಕ್ರಿ.ಶ. 1129ರ ಶ್ರವಣಬೆಳಗೊಳ ಶಾಸನವೊಂದರಲ್ಲಿ ಹೇಮಸೇನ ಆಚಾರ್ಯ ತರ್ಕ, ವ್ಯಾಕರಣ ಮತ್ತು ಸಿದ್ಧಾಂತ ಎಂಬ ತ್ರೈವಿದ್ಯೆಯಲ್ಲಿ ಪರಿಣತನಾಗಿದ್ದ ಉಲ್ಲೇಖ, ಮೇಘಚಂದ್ರನೂ ಇದೇ ತ್ರೈವಿದ್ಯೆಯಲ್ಲಿ ಪಾರಂಗತನಾಗಿದ್ದ ಉಲ್ಲೇಖ ಹಾಗೂ 1074ರ ಮುರೇಳ ಶಾಸನದಲ್ಲಿ ಅನಂತವೀರ್ಯ ಮುನಿಯನ್ನು ವ್ಯಾಕರಣ, ನಿಘಂಟು, ಗಣಿತ, ಜ್ಯೋತಿಷ್ಯ, ಛಂದಸ್ಸು, ಅಲಂಕಾರ, ಮಹಾಕಾವ್ಯ, ನಾಟಕ ಮತ್ತು ಆಧ್ಯಾತ್ಮಿಕ ಶಾಸ್ತ್ರಗಳಲ್ಲಿ ಪರಿಣತನೆಂದು ಬಣ್ಣಿಸಿದ ಉಲ್ಲೇಖ ಈ 'ತ್ರೈವಿದ್ಯೆ' ಎಂಬ ಪರಿಕಲ್ಪನೆ ಕೇವಲ ಮೂರು ವಿಷಯಗಳಿಗೆ ಸೀಮಿತವಾದ ಪದವಾಗಿರದೆ, ಒಂದು ಸಮಗ್ರ ಪಾಂಡಿತ್ಯದ ಸಂಕೇತವಾಗಿ ಬೆಳೆದಿತ್ತು ಎಂಬುದನ್ನು ಸೂಚಿಸುತ್ತದೆ.

ಈ ಪಠ್ಯಕ್ರಮದ ವ್ಯಾಪ್ತಿ ತ್ರೈವಿದ್ಯೆ, ವ್ಯಾಕರಣ, ತರ್ಕ, ಸಿದ್ಧಾಂತ, ನಿಘಂಟು, ಅಲಂಕಾರ, ಕಾವ್ಯಾಲೋಕನ, ಸಾಹಿತ್ಯ, ಗಣಿತ, ವೈದ್ಯ, ಗೀತವಾದ್ಯ, ನೃತ್ಯ, ಮಂತ್ರಗಾನ, ವಾಸ್ತುಶಿಲ್ಪ, ಆಗಮ, ಷಡ್ದರ್ಶನ, ರಾಜಕೀಯ, ಬಾಣಪ್ರಯೋಗ, ಗರಡಿ, ಗಜ–ಅಶ್ವ ಪರೀಕ್ಷೆ, ಇಂದ್ರಜಾಲ ಮುಂತಾದ ಅಸಂಖ್ಯ ವಿಷಯಗಳವರೆಗೆ ವಿಸ್ತರಿಸಿತೆಂಬ ವಿವರ ಒಂದೆಡೆ ಜೈನ ಶಿಕ್ಷಣ ವ್ಯವಸ್ಥೆಯ ಅಸಾಧಾರಣ ವೈವಿಧ್ಯವನ್ನು ತೋರಿಸಿದರೆ, ಇನ್ನೊಂದೆಡೆ ಒಬ್ಬ ವ್ಯಕ್ತಿ ಇಷ್ಟೆಲ್ಲ ವಿಷಯಗಳನ್ನು ನಿಜವಾಗಿಯೂ ಕಲಿಯಲು ಸಾಧ್ಯವೇ ಎಂಬ ಸಂಶಯವನ್ನೂ ಹುಟ್ಟಿಸುತ್ತದೆ. ಕವಿಗಳು ಸಾಂಪ್ರದಾಯಿಕವಾಗಿ 'ಅರವತ್ತನಾಲ್ಕು ಕಲೆ'ಗಳ ಪಟ್ಟಿಯನ್ನು ಕಾವ್ಯ ಸಂಪ್ರದಾಯದ ಭಾಗವಾಗಿ ಸೇರಿಸಿರಬಹುದೆಂಬ ಸಾಧ್ಯತೆಯನ್ನೂ ಗಣನೆಗೆ ತೆಗೆದುಕೊಂಡಾಗ, ಈ ಪಟ್ಟಿಯನ್ನು ವಾಸ್ತವಿಕ ಪಠ್ಯಕ್ರಮದ ಪ್ರತಿಬಿಂಬವೆಂದು ಸಂಪೂರ್ಣವಾಗಿ ಒಪ್ಪಿಕೊಳ್ಳುವ ಬದಲು, ಆದರ್ಶಪ್ರಾಯ ಪಾಂಡಿತ್ಯದ ಒಂದು ಸಾಂಸ್ಕೃತಿಕ ಮಾದರಿಯಾಗಿ (cultural ideal) ಗ್ರಹಿಸುವುದೇ ವಿಮರ್ಶಾತ್ಮಕವಾಗಿ ಹೆಚ್ಚು ಸಮಂಜಸ. ಭುಜಬಲಚರಿತೆಯಲ್ಲಿ ಭರತ–ಬಾಹುಬಲಿಗಳು ಕಲಿತ ಆಗಮತತ್ವ, ಆಯುರ್ವೇದ, ಧನುರ್ವಿದ್ಯೆ, ಜ್ಯೋತಿಷ್ಯ, ಮಂತ್ರಗಾನ, ವ್ಯಾಕರಣ, ಕಾಮಶಾಸ್ತ್ರ ಮುಂತಾದ ವಿದ್ಯೆಗಳ ವಿವರ ಸಹ ಇದೇ ಆದರ್ಶವಾದ ಪಾಂಡಿತ್ಯ–ಪರಿಕಲ್ಪನೆಯ ಮುಂದುವರಿಕೆಯಾಗಿ ಕಂಡುಬರುತ್ತದೆ.

**ಸಮಾರೋಪ**

ಶ್ರವಣಬೆಳಗೊಳ ಸೇರಿದಂತೆ ಕರ್ನಾಟಕದ ವಿವಿಧೆಡೆ ದೊರಕುವ ಶಾಸನಗಳು ಮತ್ತು ವಡ್ಡಾರಾಧನೆಯಂತಹ ಪ್ರಾಚೀನ ಕನ್ನಡ ಸಾಹಿತ್ಯ ಕೃತಿಗಳ ಆಧಾರದ ಮೇಲೆ ಜೈನ ಶಿಕ್ಷಣ ಪರಂಪರೆಯ ಸಮಗ್ರ ಸ್ವರೂಪವನ್ನು ವಿಶ್ಲೇಷಿಸಿದೆ. ರಾಜಾಶ್ರಯದ ಸುದೀರ್ಘ ಇತಿಹಾಸ, ಬಸದಿ–ಚೈತ್ಯಾಲಯಗಳು ವಿದ್ಯಾಕೇಂದ್ರಗಳಾಗಿ ರೂಪುಗೊಂಡ ಬಗೆ, ವಿದ್ಯಾಭ್ಯಾಸ ಆರಂಭದ ವಯೋಮಿತಿ, ಗುರು–ಶಿಷ್ಯ ಪರಿಭಾಷೆ ಮತ್ತು ಸಂಬಂಧ, ವೈಜ್ಞಾನಿಕ ಬೋಧನಾ ವಿಧಾನ, ಧಾರ್ಮಿಕ–ಜಾತ್ಯತೀತ ಜ್ಞಾನದ ಸಮತೋಲಿತ ಪಠ್ಯಕ್ರಮ ಮತ್ತು ಸಹ ಶಿಕ್ಷಣ ಪದ್ಧತಿ ಎಂಬ ಆರೂ ಆಯಾಮಗಳಲ್ಲಿ ಜೈನ ಶಿಕ್ಷಣ ವ್ಯವಸ್ಥೆ ಅಂದಿನ ಕಾಲಘಟ್ಟದ ಚಾಲ್ತಿಯಲ್ಲಿದ್ದ ವೈದಿಕ ವ್ಯವಸ್ಥೆಗಿಂತ ಸಾಮಾಜಿಕವಾಗಿ ಹೆಚ್ಚು ಮುಕ್ತ ಮತ್ತು ಸಮಾನತಾಪೂರ್ಣ ವ್ಯವಸ್ಥೆಯಾಗಿ ರೂಪುಗೊಂಡಿತ್ತು ಎಂಬುದನ್ನು ಈ ಲೇಖನ ದೃಢಪಡಿಸಿದೆ. ಬಸದಿ ಕೇಂದ್ರಿತ ಸಾಂಸ್ಥಿಕ ಶಿಕ್ಷಣ ಮತ್ತು ಗುರುಮನೆ ಕೇಂದ್ರಿತ ವೈಯಕ್ತಿಕ ಶಿಕ್ಷಣ ಎಂಬ ಎರಡು ಸಮಾನಾಂತರ ವ್ಯವಸ್ಥೆಗಳ ಮೂಲಕ ಬೆಳೆದ ಈ ಪರಂಪರೆ, ಕನ್ನಡ ಭಾಷೆ–ಸಾಹಿತ್ಯದ ಬೆಳವಣಿಗೆಗೂ ನೇರ ಕೊಡುಗೆ ನೀಡಿತು ಎಂಬುದನ್ನೂ ಈ ಅಧ್ಯಯನ ಎತ್ತಿ ತೋರಿಸುತ್ತದೆ. ಮುಂದಿನ ಸಂಶೋಧನೆಗಳು ಕರ್ನಾಟಕದ ಇತರ ಜೈನ ಕೇಂದ್ರಗಳ ಶಾಸನಗಳನ್ನೂ ತೌಲನಿಕವಾಗಿ ಪರಿಶೀಲಿಸಿ, ಈ ಪರಂಪರೆಯ ಪ್ರಾದೇಶಿಕ ವ್ಯಾಪ್ತಿ ಮತ್ತು ಕಾಲಾನುಕ್ರಮಿಕ ಬದಲಾವಣೆಗಳನ್ನು ಇನ್ನಷ್ಟು ಸ್ಪಷ್ಟಪಡಿಸಬೇಕಿದೆ.

**ಕೊನೆ ಟಿಪ್ಪಣಿಗಳು:**

1. Salectore B. A., Mediaeval Jainism Bombay, 1938, Page No. 2.
2. ನರಸಿಂಹಾಚಾರ್ ಆರ್., ಶಾಸನ ಪದ್ಯಮಂಜರಿ, ಪುಟ ಸಂಖ್ಯೆ 250.
3. I A, VII, Page No. 37
4. ಹಂಪನಾ ಕಮಲಾ, ಭೂಮಿಕಾ, ಸಂಪುಟ–1, ಪುಟ ಸಂಖ್ಯೆ 193.
5. ಹಂಪನಾ ಕಮಲಾ, ಭೂಮಿಕಾ, ಸಂಪುಟ–1, ಪುಟ ಸಂಖ್ಯೆ 193.
6. Sharma S. R., 1940, Page No. 32
7. ಎ. ಕ. XI, ಚಿಂತಾಮಣಿ, 24, ಕ್ರಿ. ಶ. 998.
8. ಎಂ. ಎ. ಆರ್., 1921, ಪುಟ ಸಂಖ್ಯೆ 410, ಕ್ರಿ. ಶ. 1231.
9. ಇ. ಐ, XIX, 1990, ಕ್ರಿ. ಶ. 1054.
10. ಎಸ್. ಐ. ಐ., XVIII, 1810, ಕ್ರಿ. ಶ. 1118.
11. ಕರ್ನಾಟಕ ಭಾರತಿ, ಸಂಪುಟ–2, ಏಕ್ಸಂಬಾ ಶಾಸನ, ಕ್ರಿ. ಶ. 1113.
12. ಎಸ್. ಐ. ಐ. ಸಂಪುಟ 31, 164ಳಿ, ಕ್ರಿ, ಶ. 1110.
13. ಇ. ಐ., (ಎ. ಇಂಡಿಕಾ), ಘನಸಿ, ಪುಟ ಸಂಖ್ಯೆ 19. ಕ್ರಿ. ಶ. 1104.
14. ಎ. ಕ. ಸಂಪುಟ. 53, 1110, ಕ್ರಿ, ಶ. 1128.
15. ಎ. ಕ. ಸಂಪುಟ 53, 1331, ಕ್ರಿ, ಶ. 1113.

16. ಎ. ಕ. ಸಂಪುಟ 51, ಚಿಕ್ಕಮಗಳೂರು, 249, ಕ್ರಿ, ಶ. 1060.
17. ಎ. ಕ. ಸಂಪುಟ 1353, ಶಿಕಾರಿಪುರ, 14ಳ, ಕ್ರಿ, ಶ. 1022.
18. ಎಸ್. ಐ. ಐ, ಸಂಪುಟ 4315ವನ, 1811, ಕ್ರಿ. ಶ. 1120.
19. ಚಿದಾನಂದಮೂರ್ತಿ. ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ಸಂಖ್ಯೆ 100.
20. ಶಾಮಶಾಸ್ತ್ರಿ. ಆರ್. ಧರ್ಮಾಮೃತಮ್. ಪುಟ ಸಂಖ್ಯೆ 410.
21. ಎಸ್. ಐ. ಐ. ಸಂಪುಟ 423, ಕ್ರಿ, ಶ. 219–20.
22. ನರಸಿಂಹಾಚಾರ್. ಡಿ. ಎಲ್. ವಡ್ಡಾರಾಧನೆ, ಪುಟ ಸಂಖ್ಯೆ 47.
23. ನರಸಿಂಹಾಚಾರ್. ಡಿ. ಎಲ್. ವಡ್ಡಾರಾಧನೆ, ಪುಟ ಸಂಖ್ಯೆ 47.
24. ಶಾಂತರಾಜ ಶಾಸ್ತ್ರಿ. ಎ.(ಸಂಪುಟ) ಪಾಮಣವರ್ಣಿಯ ಜ್ಞಾನ ಚಂದ್ರಚರಿತೆ–2, ಪುಟ ಸಂಖ್ಯೆ 130
25. ಉಲ್ಲೇಖ–ದಿಸಾಯಿ. ಎಚ್. ಆರ್. ' ಕಲ್ಯಾಣ ಚಾಲುಕ್ಯರ ಕಾಲದ ಶಿಕ್ಷಣವ್ಯವಸ್ಥೆ' ಪುಟ ಸಂಖ್ಯೆ 311 ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ.
26. ಎ. ಕ. ಸಂಪುಟ 2, 199. ಕ್ರಿ. ಶ. 200.
27. ಎ. ಕ. ಸಂಪುಟ 2, 1352. ಕ್ರಿ. ಶ. 11310.
28. ಧರಣೇಂದ್ರಯ್ಯ ಕಾ. ಸಾ., ಜೈನಧರ್ಮ ಹೊಯ್ಸಳರ ಕಾಲ: ಕರ್ನಾಟಕ ಪರಂಪರೆ ಭಾಗ –2, 1930, ಪುಟ ಸಂಖ್ಯೆ 226–27.
29. ಎ. ಕ. ಸಂಪುಟ 135ರವ, ಸಾಗರ, 40, ಕ್ರಿ. ಶ. 1022.
30. ಎ. ಕ. ಸಂಪುಟ 53ರ, ಶ್ರವಣಬೆಳಗೊಳ, 68, ಕ್ರಿ. ಶ. 800.
31. ಎ. ಕ. ಸಂಪುಟ II, 54, ಕ್ರಿ, ಶ. ಹತ್ತನೆಯ ಶತಮಾನ.
32. ಎ. ಕ. ಸಂಪುಟ II, 67, ಕ್ರಿ. ಶ. 1139.
33. ಎ. ಕ. ಸಂಪುಟ II, 69, ಕ್ರಿ. ಶ. 1139.
34. ಎ. ಕ. ಸಂಪುಟ II, 112, ಕ್ರಿ. ಶ. 1100.
35. ಎ. ಕ. ಸಂಪುಟ 53 ರವ, 9, ಕ್ರಿ. ಶ. 800.
36. J. I. S. I, ಪುಟ ಸಂಖ್ಯೆ 149.1119.
37. ಚಿದಾನಂದ ಮೂರ್ತಿ, ಎಂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ಸಂಖ್ಯೆ 229.
38. "ಶ್ರೀ ವಾದಿರಾಜ ಪರನಾಮಧೇಯ ಶ್ರೀ ಮಕ್ಷನಸೇನ ಪಂಡಿತದೇವರ ಶಿಷ್ಯರೊಡೆಯ ದೇವರನಿಸಿದ ಶ್ರೀ ವಿಜಯ ಪಂಡಿಯರಂತೆವಾಸಿಗಳಪ್ಪ ಶ್ರೀ ಮತ್ಯಮಳಭದ್ರ ಪಂಡಿತದೇವರ ಕಾಲಾಂಕರ್ಚ"(ಇಳ,135ರವ, 64, 40, 1022 ಮತ್ತು 1043) ಚಿದಾನಂದ ಮೂರ್ತಿ, ಎಂ. ಕರ್ನಾಟಕದ ಶಾಸನದ ಸಾಂಸ್ಕೃತಿಕ ಅಧ್ಯಯನದಲ್ಲಿ ಉಲ್ಲೇಖಿಸಿದ್ದು )
39. ಎ. ಕ. ಸಂಪುಟ II, 57, ಕ್ರಿ. ಶ. 1100.
40. ಎ. ಕ. ಸಂಪುಟ II, 63, ಕ್ರಿ. ಶ. 1136.
41. ಎ. ಕ. ಸಂಪುಟ II, 234, ಕ್ರಿ. ಶ. 1118.
42. ಡಿಯೋ ಎಸ್. ಬಿ. History of Jaina Monochism Page no. 134
43. ಎ. ಕ. ಸಂಪುಟ 53ರ, ಶ್ರವಣಬೆಳಗೊಳ, 70, ಕ್ರಿ. ಶ. 1133.
44. ಎ. ಕ. VIII, 40, ಕ್ರಿ, ಶ. 1043.

45. ಎ. ಕ. V, 1144, ಕ್ರಿ. ಶ. 1210.
46. ನರಸಿಂಹಾಚಾರ್.ಡಿ. ಎಲ್. ಸಂಪಾದಕರು ವಡ್ಡಾರಾಧನೆ, ಪುಟ ಸಂಖ್ಯೆ 47.
47. ಪಂಚಮುಖಿ. ಆರ್. ಎಸ್. ಕರ್ನಾಟಕ ಇತಿಹಾಸ; ಪುಟ ಸಂಖ್ಯೆ 41.
48. ನರಸಿಂಹಾಚಾರ್.ಡಿ. ಎಲ್. ಸಂಪಾದಕರು ವಡ್ಡಾರಾಧನೆ, ಪುಟ ಸಂಖ್ಯೆ 47–48.
49. ನರಸಿಂಹಾಚಾರ್.ಡಿ. ಎಲ್. ಸಂಪಾದಕರು ವಡ್ಡಾರಾಧನೆ, ಪುಟ ಸಂಖ್ಯೆ 121.
50. ನರಸಿಂಹಾಚಾರ್.ಡಿ. ಎಲ್. ಸಂಪಾದಕರು ವಡ್ಡಾರಾಧನೆ, ಪುಟ ಸಂಖ್ಯೆ 121.
51. ಎ. ಕ. ಸಂಪುಟ 53ರ, ಶ್ರವಣಬೆಳಗೊಳ, 1333, ಕ್ರಿ, ಶ. 1145.
52. ಎ. ಕ. ಸಂಪುಟ 53ರ, ಶ್ರವಣಬೆಳಗೊಳ, 1333, ಕ್ರಿ, ಶ. 1145.
53. ಎ. ಕ. ಸಂಪುಟ 53ರ, ಶ್ರವಣಬೆಳಗೊಳ, 1333, ಕ್ರಿ, ಶ. 1145.
54. ಎ. ಕ. ಸಂಪುಟ 53ರ, ಶ್ರವಣಬೆಳಗೊಳ, 1333, ಕ್ರಿ, ಶ. 1145.
55. ಎ. ಕ. ಸಂಪುಟ 53ರ, ಶ್ರವಣಬೆಳಗೊಳ, 1333, ಕ್ರಿ, ಶ. 1145.
56. ಎ. ಕ. ಸಂಪುಟ 53ರ, ಶ್ರವಣಬೆಳಗೊಳ, 1333, ಕ್ರಿ, ಶ. 1145.
57. ಎ. ಕ. ಸಂಪುಟ 53ರ, ಶ್ರವಣಬೆಳಗೊಳ, 33, ಕ್ರಿ. ಶ. 1129.
58. ಎ. ಕ. ಸಂಪುಟ 53ರ, ಶ್ರವಣಬೆಳಗೊಳ, 1333, ಕ್ರಿ, ಶ. 1145.
59. ಎಸ್. ಐ. ಐ. 11, ಭಾಗ–1, ನಂಬರ–61, ಕ್ರಿ, ಶ. 1024.
60. ಶಿರೂರ.ಬಿ.ಎ. ' ಶ್ರವಣಬೆಳಗೊಳ–ರಾಜಕೀಯ, ಸಾಹಿತ್ಯಕ ಮತ್ತು ಸಾಂಸ್ಕೃತಿಕ–ಮಹತ್ವ ' ಧಾರವಾಡ, ಪುಟಸಂಖ್ಯೆ 260.

## ಪರಾಮರ್ಶನ ಗ್ರಂಥಗಳು:


1. ಚಿದಾನಂದಮೂರ್ತಿ ಎಂ., (2014), ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ ಶ 450–1150), ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
2. ಕೊಪ್ಪ ಎಸ್. ಕೆ., (1990), ತರ್ದವಾಡಿ ನಾಡು ಒಂದು ಅಧ್ಯಯನ, ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.
3. ಶಾಸನಗಳಲ್ಲಿ ಕರ್ನಾಟಕದ ಸ್ತ್ರೀಸಮಾಜ, (1990), ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
4. ವೀರಪ್ಪ ಎಸ್. ಎಸ್., (1984), ಭಾರತೀಯ ಶಿಕ್ಷಣದ ಇತಿಹಾಸ, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
5. ನಾಗರಾಜು ಡಿ. ಎಂ., (2012), ಕಲ್ಯಾಣ ಚಾಲುಕ್ಯ ಆರನೇಯ ವಿಕ್ರಮಾದಿತ್ಯನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
6. ತಿಪ್ಪೇರುದ್ರಸ್ವಾಮಿ ಎಚ್., (2007), ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು: ಡಿ. ವಿ. ಕೆ. ಮೂರ್ತಿ ಪ್ರಕಾಶನ.
7. ದೇಸಾಯಿ ಎಚ್. ಆರ್., (2010), ಕಲ್ಯಾಣ ಚಾಲುಕ್ಯರ ಶಿಕ್ಷಣ ಪದ್ಧತಿ, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
8. ನಂದಿಮಠ ಎಸ್. ಸಿ., (ವರ್ಷ ಲಭ್ಯವಿಲ್ಲ ), ಕರ್ನಾಟಕದ ಧರ್ಮಗಳು, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
9. ಹಂಪ ನಾಗರಾಜಯ್ಯ, (1998), ಶಾಸನಗಳಲ್ಲಿ ಬಸದಿಗಳು, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
10. ನಾಗರಾಜಯ್ಯ, (1981), ಕರ್ನಾಟಕ ಮತ್ತು ಜೈನಧರ್ಮ, ಬೆಂಗಳೂರು: ಐ. ಬಿ. ಎಚ್. ಪ್ರಕಾಶನ.